**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವನಹಳ್ಳಿ**

**ಉಪಸ್ಥಿತರು:** ಶ್ರೀ ಸಂದೇಶ.ಕೆ., ಎಂ.ಎ.,ಎಲ್ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು,
ದೇವನಹಳ್ಳಿ.

**2021 ನೇ ಇಸವಿ, ಸೆಪ್ಟೆಂಬರ್ 4 ನೇ ತಾರೀಖು**

**ಅಸಲು ದಾವಾ ಸಂಖ್ಯೆ: 499/2012**

**ವಾದಿಯರು:** ಶ್ರೀಮತಿ. ಲಕ್ಷ್ಮಮ್ಮ ಮತ್ತು ಇತರರು

**-ವಿರುದ್ಧ-**

**ಪ್ರತಿವಾದಿ:** ಶ್ರೀ. ಮುನಿವೆಂಕಟಪ್ಪ

**ಮಧ್ಯಂತರ ಅರ್ಜಿ-2 ರ ಪಕ್ಷಕಾರರು**

**ಅರ್ಜಿದಾರ/ಪ್ರತಿವಾದಿ:** ಶ್ರೀ. ಮುನಿವೆಂಕಟಪ್ಪ

-ವಿರುದ್ದ-

**ಎದುರುದಾರರು/ವಾದಿಯರು :** ಶ್ರೀಮತಿ. ಲಕ್ಷ್ಮಮ್ಮ ಮತ್ತು ಇತರರು

*******

**ಪ್ರತಿವಾದಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ-2 ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 7 ನಿಯಮ 11(ಎ) ಮತ್ತು (ಡಿ) ಸಹಕಲಂ 151 ರ ಮೇಲೆ ಆದೇಶ**

ಪ್ರತಿವಾದಿಯು ಮಧ್ಯಂತರ ಅರ್ಜಿ-2 ನ್ನು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 7 ನಿಯಮ 11 (ಎ) ಮತ್ತು (ಡಿ) ಸಹಕಲಂ 151 ರಡಿಯಲ್ಲಿ ಅರ್ಜಿ ಸಲ್ಲಿಸಿ, ವಾದಿಯ ವಾದ ಪತ್ರವನ್ನು ತಿರಸ್ಕರಿಸುವಂತೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

<u>ಅರ್ಜಿಯ ಸಂಕ್ಷಿಪ್ತ ಸಾರಾಂಶವು ಈ ಕೆಳಗಿನಂತಿದೆ:</u>

2.ಅರ್ಜಿದಾರರು/ ಪ್ರತಿವಾದಿ ತನ್ನ ಪ್ರಮಾಣ ಪತ್ರದಲ್ಲಿ ಪ್ರಮಾಣೀಕರಿಸಿರುವಂತೆ, ಪ್ರಸ್ತುತ ದಾವೆಯನ್ನು ವಾದಿಯರು ಪ್ರತಿವಾದಿಯ ವಿರುದ್ದ ದಾವಾ ಸ್ವತ್ತಿಗೆ ಸಂಬಂದಿಸಿದಂತೆ ನಿರ್ದಿಷ್ಟ ಅನುಷ್ಟಾನ ಕಾಯ್ದೆ ರಡಿಯಲ್ಲಿ ದಾವೆ ಸಲ್ಲಿಸಿರುತ್ತಾರೆ. ಪ್ರತಿವಾದಿಯು ಸದರಿ ವಾದ ಪತ್ರವನ್ನು ವಿರೋಧಿ ಪ್ರತಿವಾದ ಪತ್ರವನ್ನು ಸಹ ಸಲ್ಲಿಸಿರುತ್ತಾರೆ. ವಾದಿಗೆ ಪ್ರಸ್ತುತ ದಾವೆ ಸಲ್ಲಿಸಲು ಯಾವುದೇ ಅಧಿಕಾರ ಇರುವುದಿಲ್ಲ. ವಾದ ಪತ್ರವನ್ನು ಗಮನಿಸಿದಾಗ ವಾದಿಯ ಸುಳ್ಳು ಅಂಶಗಳ ಆಧಾರದ ಮೇಲೆ ಪ್ರತಿವಾದಿಯ ವಿರುದ್ದ ದಾವೆ ಸಲ್ಲಿಸಿರುವುದು ಕಂಡುಬಂದಿರುತ್ತದೆ. ಅಲ್ಲದೇ ದಾವೆ ಹೊಡಲು ವ್ಯಾಜ್ಯ ಕಾರಣ ಸೃಷ್ಟಿಮಾಡಿಕೊಂಡಿರುವುದು ಕಂಡುಬಂದಿರುತ್ತದೆ. ಸೃಷ್ಟಿಮಾಡಿಕೊಂಡ ದಾಖಲೆಗಳ ಆಧಾರದ ಮೇಲೆ ವಾದಿಯು ದಾವೆ ಸಲ್ಲಿರುವುದು ಊರ್ಜಿತವಾಗಿರುವುದಿಲ್ಲ. ದಿನಾಂಕ: 01-01-1990 ರ ಕ್ರಯ ಕರಾರು ಪತ್ರವನ್ನು ಸೃಷ್ಟಿಮಾಡಿಕೊಂಡ ದಾಖಲೆಗಳು ಆಗಿದ್ದು, ಸದರಿ ದಾಖಲೆಯು ನೊಂದಣಿಯಾಗಿರುವುದಿಲ್ಲ. ದಾವಾ ಸ್ವತ್ತಿನ ಬೆಲೆ ಸುಮಾರು 2 ಕೋಟಿ ರೂಪಾಯಿಗಳು ಇರುತ್ತದೆ. ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಪ್ರಸ್ತುತ ದಾವೆ ಸಲ್ಲಿಸಿರುತ್ತಾರೆ. ಅಲ್ಲದೇ ವಾದಿಯ ದಾವೆಯು ಕಾಲ ಪರಿಮಿತಿ ಅಧಿನಿಯಮದೊಳಗೆ ಇರುವುದಿಲ್ಲ. ವಾದಿ ದಾವೆ ಸಲ್ಲಿಸಲು ವ್ಯಾಜ್ಯ ಕಾರಣ ಇರುವುದಿಲ್ಲ ಆದ್ದರಿಂದ ವಾದಿಯ ವಾದ ಪತ್ರವನ್ನು ತಿರಸ್ಕರಿಸಬೇಕೆಂದು ಕೋರಿಕೊಂಡಿರುತ್ತಾರೆ.

3. ***ಪ್ರತಿವಾದಿ ಸಲ್ಲಿಸಿರುವ ಮಧ್ಯಂತರ ಅರ್ಜಿ-2ನ್ನು ವಿರೋಧಿಸಿ 2 ನೇ ವಾದಿಯ ಕಾನೂನು ವಾರಸುದಾರರು ತಕರಾರು ಸಲ್ಲಿಸಿದ್ದು,*** ತಮ್ಮ ತಕರಾರಿನಲ್ಲಿ ಪ್ರತಿವಾದಿ ತನ್ನ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೊಡಿರುತ್ತದೆ. ಪ್ರತಿವಾದಿ ಸಲ್ಲಿಸಿರುವ ಅರ್ಜಿ ಕಾನೂನು ಮತ್ತು ಸಂಗತಿ ದೃಷ್ಟಿಯಿಂದ ಊರ್ಜಿತವಾಗಿರುವುದಿಲ್ಲ. ವಾದಿಗೆ ಕ್ರಯಕರಾರು ಪತ್ರ ಆಗಿದ್ದು, ಸಂಪೂರ್ಣ ಹಣವನ್ನು ಪ್ರತಿವಾದಿಗೆ ಪಾವತಿ ಮಾಡಿರುತ್ತಾರೆ. ಅಲ್ಲದೇ ವಾದಿಯೇ ದಾವಾ ಸ್ವತ್ತಿನ ಸ್ವಾಧೀನತೆಯನ್ನು ಹೊಂದಿರುತ್ತಾರೆ. ದಾವಾ ಸ್ವತ್ತಿನ ಮಾರುಕಟ್ಟೆ ಬೆಲೆ ಹೆಚ್ಚಾದ

ನಂತರದಲ್ಲಿ ಪ್ರತಿವಾದಿಯು ದಾವಾ ಸ್ವತ್ತನ್ನು ಕಬಳಿಸಲು ಪ್ರಯತ್ನಿಸಿರುತ್ತಾರೆ. ದಾವೆ ಹಾಕುವ ಪೂರ್ವದಲ್ಲಿ ವಾದಿಯರು ತಮ್ಮ ವಕೀಲರು ಮೂಲಕ ಪ್ರತಿವಾಗೆ ನೋಟೀಸ್ ನೀಡಿದ್ದು, ಸದರಿ ನೋಟೀಸ ಪ್ರತಿವಾದಿಗೆ ಜಾರಿಯಾಗಿರುತ್ತದೆ. ಆದರೆ, ಪ್ರತಿವಾದಿಯು ಯಾವುದೇ ಉತ್ತರ ನೀಡಿರುವುದಿಲ್ಲ. ಆದ್ದರಿಂದ ಪ್ರತಿವಾದಿಯು ದುರುದ್ದೇಶದಿಂದ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂಬುದು ಸ್ಪಷ್ಟವಾಗಿ ತಿಳಿದು ಬಂದಿರುತ್ತದೆ. ಪ್ರತಿವಾದಿಯು ತನ್ನ ಅರ್ಜಿಯಲ್ಲಿ ತಿಳಿಸಿರುವ ಅಂಶಗಳು ಊರ್ಜಿತವಾಗಿರುವುದಿಲ್ಲ. ತನ್ನ ಹೊಣೆಗಾರಿಕೆ ಯಿಂದ ತಪ್ಪಿಸಿಕೊಳ್ಳಲು ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುತ್ತಾರೆ. ವ್ಯಾಜ್ಯ ಕಾರಣ ಉದ್ಭವ ವಾದ ನಂತರ ವಾದಿಯು ಪ್ರಸ್ತುತ ದಾವೆಯನ್ನು ಸಲ್ಲಿಸಿರುತ್ತಾರೆ. ಅಲ್ಲದೇ ಸಂಪೂರ್ಣ ಹಣವನ್ನು ನೀಡಿ, ವಾದಿಯು ದಾವಾ ಸ್ವತ್ತಿನ ಸ್ವಾಧೀನತೆಯನ್ನು ಹೊಂದಿರುತ್ತಾರೆ. ಒಂದು ವೇಳೆ ಅರ್ಜಿಯನ್ನು ಪುರಸ್ಕರಿಸಿದರೆ ದ್ವಿವ್ಯವಹರಣೆಗಳಿಗೆ ದಾರಿ ಮಾಡಿಕೊಟ್ಟಾಂತಾಗುತ್ತದೆ. ಆದ್ದರಿಂದ ಪ್ರತಿವಾದಿ ಸಲ್ಲಿಸಿರುವ ಮಧ್ಯಂತರ ಅರ್ಜಿ-2 ನ್ನು ತಿರಸ್ಕರಿಸಬೇಕೆಂದು ಕೋರಿಕೊಂಡಿರುತ್ತಾರೆ.

4. ಪ್ರತಿವಾದಿಯ ಮತ್ತು ವಾದಿಯರ ವಾದವನ್ನು ಆಲಿಸಲಾಯಿತು ಮತ್ತು ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು.

5. ಈ ಕೆಳಗಿನ ಅಂಶಗಳು ನ್ಯಾಯಾಲಯದ ಪರ್ಯಾಲೋಚನೆಗೆ ಉದ್ಭವಿಸುತ್ತವೆ:

**1. ಪ್ರತಿವಾದಿ ಸಲ್ಲಿಸಿರುವ ಮದ್ಯಂತರ ಅರ್ಜಿ-2 ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 7 ನಿಯಮ 11 (ಎ) ಮತ್ತು (ಡಿ) ಸಹಕಲಂ 151 ರ ಅರ್ಜಿಯಲ್ಲಿ ವಾದಿಯ ವಾದ ಪತ್ರನ್ನು ತಿರಸ್ಕರಿಸಲು ಎಲ್ಲಾ ಅಂಶಗಳನ್ನು ಒಳಗೊಂಡಿರುತ್ತದೆ ಎಂಬುದನ್ನು ಮೇಲ್ನೋಟಕ್ಕೆ ಸಾಭೀತು ಪಡಿಸಿರುತ್ತಾರೆಯೇ?**

**2. ಏನು ಆದೇಶ?**

**6.** ಈ ಮೇಲಿನ ಅಂಶಗಳಿಗೆ ಈ ಕೆಳಗೆ ವಿವರಿಸಿರುವ ಕಾರಣಗಳಿಗಾಗಿ ನ್ಯಾಯಾಲಯದ ಉತ್ತರಗಳು ಈ ಕೆಳಗಿನಂತಿವೆ:

**ಅಂಶ 1 : ನಕಾರಾತ್ಮಕ**

**ಅಂಶ 2 : ಅಂತಿಮ ಆದೇಶದಂತೆ**

**ಕಾರಣಗಳು**

7. **ಅಂಶ-1:** ಕಾನೂನು ಸ್ಪಷ್ಟವಾಗಿ ತಿಳಿಸಿರುವಂತೆ, ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 7 ನಿಯಮ 11 ರ ರಲ್ಲಿ ತಿಳಿಸಿರುವಂತೆ, ವಾದ ಪತ್ರವನ್ನು ತಿರಸ್ಕರಿಸುವಾಗ, ವಾದಪತ್ರದ ಅಂಶಗಳನ್ನು ಮಾತ್ರ ಪರಿಗಣಿಸಬೇಕೆ ಹೊರೆತು ಪ್ರತಿವಾದ ಪತ್ರದ ಅಂಗಳನ್ನು ಪರಿಗಣಿಸಬಾರದು ಎಂದು ತಿಳಿಸಿರುತ್ತದೆ. ಅಲ್ಲದೇ ***ILR 2016 KAR 2429 between Smt. N. Triveni V/s Sri. G.T. Shankr*** ಪ್ರಕರಣದಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 7 ನಿಯಮ 11 ರ ಅರ್ಜಿಯನ್ನು ಪುರಸ್ಕರಿಸುವಾಗ ವಾದ ಪತ್ರದಲ್ಲಿ ಇರುವ ಅಂಶಗಳನ್ನು ಮಾತ್ರ ಪರಿಗಣಿಸಬೆಕು, ಪ್ರತಿವಾದ ಪತ್ರವನ್ನು ಪರಿಗಣಿಸಬಾರದು ಎಂದು ತಿಳಿಸಿರುತ್ತದೆ. ಅಲ್ಲದೇ ***ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯು, ಮಾದಪ್ಪ ಯಾನೆ ಶಿವಲಿಂಗಪ್ಪ ವಿರುದ್ದ ಮಡಿವಾಳಪ್ಪ*** ಪ್ರಕರಣದಲ್ಲಿ ವಾದ ಪತ್ರವನ್ನು ತಿರಸ್ಕರಿಸಲು ವಾದ ಪತ್ರದಲ್ಲಿರುವ ಅಂಶಗಳನ್ನು ಮಾತ್ರ ಪರಿಗಣಿಸಬೇಕು. ಪ್ರತಿವಾದ ಪತ್ರದ ಅಂಶಗಳ ಆಧಾರದ ಮೇಲೆ ವಾದ ಪತ್ರವನ್ನು ತಿರಸ್ಕರಿಸಬಾರದು ಎಂದು ಸ್ಪಷ್ಟವಾಗಿ ತಿಳಿಸಿರುತ್ತದೆ.

08. ವಾದಿಯ ವಾದ ಪತ್ರವನ್ನು ಗಮನಿಸಿದಾಗ ವಾದಿಯು ಪ್ರಸ್ತುತ ದಾವೆಯನ್ನು ಪ್ರತಿವಾದಿಯರ ವಿರುದ್ದ ವಿರುದ್ದ ದಾವಾ ಸ್ವತ್ತಿಗೆ ಸಂಬಂದಿಸಿದಂತೆ ನಿರ್ದಿಷ್ಟ ಅನುಷ್ಟಾನ ಕಾಯ್ದೆ ಮತ್ತು ಶಾಶ್ವತ ನಿರ್ಬಂಧಕಾಜ್ಞೆ ಕೋರಿ ದಾವೆ ಸಲ್ಲಿಸಿರುತ್ತಾರೆ. ತನ್ನ ವಾದ ಪತ್ರದಲ್ಲಿ ದಾವಾ ಸ್ವತ್ತು ಪ್ರತಿವಾದಿಗೆ ಸೇರಿರುತ್ತದೆ. ದಾವಾ ಸ್ವತ್ತನ್ನು 13 ಸಾವಿರ ರೂಪಾಯಿಗಳಿಗೆ ಪ್ರತಿವಾದಿ ಒಪ್ಪಿ, 2 ನೇ ವಾದಿ ತಾಯಿ ಮತ್ತು ಹೆಂಡತಿಗೆ ದಿನಾಂಕ: 01-01-1990 ಕ್ರಯ ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಅಲ್ಲದೇ 2 ನೇ ವಾದಿ ತಾಯಿ ರೂ. 11,500/- ಗಳನ್ನು ಮುಂಗಡ ಹಣವನ್ನು ಸಹ ನೀಡಿರುತ್ತಾರೆ. 2 ನೇ ವಾದಿ ತಾಯಿ

ಮುನಿಯಮ್ಮ ರವರ ಮರಣದ ನಂತರ ದಿನಾಂಕಃ 04-03-1994 ರಂದು ವಾದಿಯು ಉಳಿದ ಹಣವನ್ನು ಪಡೆದುಕೊಂಡು ಕ್ರಯ ಕರಾರು ಪತ್ರವನ್ನು ಬರೆದು ಕೊಡುವಂತೆ ಪ್ರತಿವಾದಿಗೆ ನೋಟೀಸ್ ನೀಡಿರುತ್ತಾರೆ. ತದನಂತರದಲ್ಲಿ ವಾದಿಯು ದಾವಾ ಸ್ವತ್ತಿನ ಒಂದು ಭಾಗವನ್ನು ಸುನಿತ್ ದಿಕ್ಷೀತ್, ಪ್ರಮೇದ್ ಕುಮಾರ್, ಉಷಾದೇವಿ ರವರಿಗೆ 2008 ರಲ್ಲಿ ಮಾರಾಟ ಮಾಡಿರುತ್ತಾರೆ. ವಾದಿಯು ಪ್ರತಿವಾದಿಗೆ ಕ್ರಯದ ಎಲ್ಲಾ ಬಾಬ್ತುನ್ನು ನೀಡಿರುತ್ತಾರೆ. ಪ್ರತಿವಾದಿ ಸದರಿ ಸ್ವತ್ತಿನ ಸ್ವಾಧೀನತೆಯನ್ನು ಹೊಂದಿರುವುದಿಲ್ಲ ಎಂಬುದಾಗಿರುತ್ತದೆ.

09. ವಾದಿಯು ತನ್ನ ವಾದ ಮಂಡನೆಯಲ್ಲಿ ಪ್ರತಿವಾದಿಯು ಕ್ರಯ ಪತ್ರವನ್ನು ಬರೆದುಕೊಟ್ಟು ದಾವಾ ಸ್ವತ್ತಿನ ಸ್ವಾಧೀತನೆಯನ್ನು ಸಹ ವಾದಿಗೆ ಬಿಟ್ಟುಕೊಟ್ಟಿರುತ್ತಾರೆ. ದಾವಾ ಸ್ವತ್ತಿನ ಬೆಲೆ ಹೆಚ್ಚಾದ ಹಿನ್ನೆಲೆಯಲ್ಲಿ ಕ್ರಯಪತ್ರ ಬರೆದು ಕೊಡಲು ನಿರಾಕರಿಸಿರುತ್ತಾರೆ ಎಂದು ತಿಳಿಸಿರುತ್ತಾರೆ.

10. ಪ್ರತಿವಾದಿಯು ನ್ಯಾಯಾಲಯದ ಮುಂದೆ ಹಾಜರಾಗಿ, ವಾದಿಯ ದಾವೆ ಕಾಲ ಪರಿಮಿತಿ ಅಧಿನಿಯಮದ ಒಳಗೆ ಇರುವುದಿಲ್ಲ. ವಾದಿಯ ಕ್ರಯಪತ್ರವನ್ನು ಸೃಷ್ಟಿಮಾಡಿಕೊಂಡಿರುತ್ತಾರೆ. ವಾದಿಯು ದಾವೆ ಸಲ್ಲಿಸಲು ಯಾವುದೇ ವ್ಯಾಜ್ಯ ಕಾರಣ ಇರುವುದಿಲ್ಲ. ಹಾಗಿದ್ದರು ಸಹ ಪ್ರತಿವಾದಿಯ ವಿರುದ್ದ ಪ್ರಸ್ತುತ ದಾವೆ ಸಲ್ಲಿಸಿರುವುದು ಊರ್ಜಿತವಾಗಿರುವುದಿಲ್ಲ. ದಾವೆ ಸಲ್ಲಿಸಲು ವ್ಯಾಜ್ಯ ಕಾರಣ ಸೃಷ್ಟಿಮಾಡಿಕೊಂಡು ಪ್ರಸ್ತುತ ದಾವೆ ಸಲ್ಲಿಸಿರುತ್ತಾರೆ. ಆದ್ದರಿಂದ ವಾದಿಯ ವಾದ ಪತ್ರವನ್ನು ತಿರಸ್ಕರಿಸಬೇಕೆಂದು ಕೋರಿಕೊಂಡಿರುತ್ತಾರೆ. ಅಲ್ಲದೇ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳನ್ನು ಸಹ ಹಾಜರುಪಡಿಸಿರುತ್ತಾರೆ.

*1). 2007 AIR SCW 3456 Hardesh ores Pvt. Ltd. V/s M/S Hede and Co sociedade de Fomento*

*Indistrial Pvt. Ltd V. M/S Head and co. 2) 2012 AIR SCW 4627 Bhau Ram V/s Jank Singh and other. 3). ILR 2008 KAR 4987 B. Mruthyunjayappa and others V/s Gurmurthy and other . 4. ILR 2007 KAR 5282 Sri Vinayaka Residents Welfare Association V/s M. Ramachandra and other. 5). ILR 2013 KAR 1171 Gokualdas Images Pvt. Ltd., V/s M/s Axis Bank limited, Ahmedabad. 6. AIR 1977 SC 2421 T. Arivandandam V/s T.V satyapal and nother. 7. (2004) 3 SCC 137. 8. (1994) 6 SCC 322.*

11. ವಾದಿಯು ಪ್ರತಿವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿಯನ್ನು ವಿರೋಧಿಸಿ ತಕರಾರು ಸಲ್ಲಿಸಿದ್ದು, ತನ್ನ ತಕರಾರಿನಲ್ಲಿ ಪ್ರತಿವಾದಿಯು ಸಲ್ಲಿಸಿರುವ ಅರ್ಜಿ ಕಾನೂನು ಹಾಗೂ ಸಂಗತಿ ದೃಷ್ಟಿಯಿಂದ ಊರ್ಜಿತವಾಗಿರುವುದಿಲ್ಲ. ವಾದಿಯು ದಾವಾ ಸ್ವತ್ತಿನ ಸ್ವಾಧೀನತೆಯನ್ನು ಹೊಂದಿರುತ್ತಾರೆ. ತಮ್ಮ ಹೊಣೆಗಾರಿಕೆಯಿಂದ ಪ್ರತಿವಾದಿ ತಪ್ಪಿಸಿಕೊಳ್ಳಲು ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುತ್ತಾರೆ. ದಾವೆ ಹೊಡುವ ಪೂರ್ವದಲ್ಲಿ ಪ್ರತಿವಾದಿಗೆ ನೋಟೀಸ್ ನೀಡಿದ್ದು, ಸದರಿ ನೋಟೀಸ್ ಜಾರಿಯಾಗಿದ್ದರು ಸಹ ಯಾವುದೇ ಉತ್ತರ ನೀಡಿರುವುದಿಲ್ಲ. ಉದ್ದೇಶಪೂರ್ವಕವಾಗಿ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದು ತಿಳಿಸಿರುತ್ತಾರೆ.

12. ವಾದಿಯ ವಾದ ಪತ್ರವನ್ನು ಗಮನಿಸಿದಾಗ ನೋಟೀಸ್ ನೀಡಿದ ನಂತರ ಪ್ರತಿವಾದಿಗೆ ಜಾರಿಯಾದರು ಸಹ ಕ್ರಯ ಪತ್ರವನ್ನು ಬರೆದುಕೊಡದ ಕಾರಣ ಪ್ರಸ್ತುತ ದಾವೆಯನ್ನು 2012 ರಲ್ಲಿ ಸಲ್ಲಿಸಿರುತ್ತಾರೆ. ಅಲ್ಲದೇ ವಾದಿಯ ದಾವೆ ಕಾಲಪರಿಮಿತಿ ಅಧಿನಿಯಮದ ಒಳಗೆ ಇರುವುದಿಲ್ಲ ಎಂದು ತಿಳಿಸಿದ್ದು, ಪ್ರಸ್ತುತ ಅಂಶವನ್ನು ಈ

ಹಂತದಲ್ಲಿ ಪರಿಗಣಿಸಲು ಸಾಧ್ಯವಿರುವುದಿಲ್ಲ. ಸದರಿ ಅಂಶವು ಕಾನೂನಾತ್ಮಕ ವಿಚಾರವಾಗಿರುತ್ತದೆ. ಸದರಿ ಅಂಶದ ಮೇಲೆ ಸಾಕ್ಷಿ ವಿಚಾರಣೆ ಅಗತ್ಯ ಇರುತ್ತದೆ. ಈ ಹಂತದಲ್ಲಿ ಸದರಿ ಅಂಶಗಳ ಆಧಾರದ ಮೇಲೆ ವಾದಿಯ ವಾದ ಪತ್ರವನ್ನು ತಿರಸ್ಕರಿಸಲು ಸಾಧ್ಯವಿರುವುದಿಲ್ಲ.

13. ಪ್ರತಿವಾದಿಯ ಪ್ರಮುಖವಾದ ಇನ್ನೊಂದು ಅಂಶ ಏನೆಂದರೆ ವಾದಿಯು ದಾವೆ ಸಲ್ಲಿಸಲು ವ್ಯಾಜ್ಯ ಕಾರಣ ಉದ್ಭವಾಗಿರುವುದಿಲ್ಲ ಎಂಬುದಾಗಿದೆ. ವಾಜ್ಯ ಕಾರಣ ಎಂಬುದು ವಿಷಯಗಳು ಸಮುಚ್ಚಲಾಯ (bundle of fact) ಆಗಿರುತ್ತದೆ. ಪ್ರತಿವಾದಿಗೆ ವಾದಿಯು ನೋಟೀಸ್ ನೀಡಿದ ನಂತರ ಪ್ರತಿವಾದಿ ವಾದಿಗೆ ಕ್ರಯ ಪತ್ರ ಬರೆದುಕೊಡದ ಕಾರಣ ವಾದಿಯ ಪ್ರತಿವಾದಿಯ ವಿರುದ್ದ ಪ್ರಸ್ತುತ ದಾವೆಯನ್ನು ಸಲ್ಲಿಸಿರುವುದು ಕಂಡುಬಂದಿರುತ್ತದೆ. ಈಗಾಗಲೇ ತಿಳಿಸಿರುವಂತೆ ಕಾಲಪರಿಮಿತಿ ವಿಷಯವನ್ನು ಈ ಹಂತದಲ್ಲಿ ಪರಿಗಣಿಸಲು ಸಾಧ್ಯವಿರುವುದಿಲ್ಲ ಸದರಿ ಅಂಶವನ್ನು ಕಾನೂನಾತ್ಮಕ ವಿಚಾರಣೆಯಾಗಿರುತ್ತದೆ.

> *ಈ ಸಂಬಂಧ ಮಾನ್ಯ ಸರ್ವೋಚ್ಚ ನ್ಯಾಯಾಲಯವು (2018) 6 SCC 422 Chhotaben & others V/s Kirtibhai Jalkrushna Bhai Tahakkar and other ಪ್ರಕರಣದಲ್ಲಿ ಕಾಲಪರಿಮಿತಿ ವಿಚಾರವನ್ನು ವಿಚಾರಣೆಯ ಹಂತದಲ್ಲಿ ತೀರ್ಮಾನಿಸಬೇಕಾದ ವಿಚಾರವಾಗಿರುತ್ತದೆ ಎಂದು ಸ್ಪಷ್ಟವಾಗಿ ತಿಳಿರುತ್ತದೆ. ಅದೇ ರೀತಿ ಕರ್ನಾಟಕ ಉಚ್ಚ ನ್ಯಾಯಾಲಯು 2019 (1) Kar.L.R 813(DB) Sangramappa V/s Smt. S. Gangamma and others ಪ್ರಕರಣದಲ್ಲಿ issue of limitation is mixed question of law and fact which may require not only*

*examination of plaint but also other evidence ಎಂದು ಸ್ಪಷ್ಟವಾಗಿ ತಿಳಿರುತ್ತದೆ.*

14. ಪ್ರಸ್ತುತ ಪ್ರಕರಣದಲ್ಲಿ ಸಹ ಪ್ರತಿವಾದಿಯು ವಾದಿಯು ದಾವೆ ಹೂಡಲು ಕಾಲವಿರಿಮಿತಿ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಆದ್ದರಿಂದ ಕೇವಲ ಪ್ರತಿವಾದ ಪತ್ರದ ಆಧಾರದ ಮೇಲೆ ಸದರಿ ಅಂಶವನ್ನು ಪರಿಗಣಿಸಿ ವಾದ ಪತ್ರವನ್ನು ತಿರಿಸ್ಕರಿಸಲು ಸಾದ್ಯವಿರುವುದಿಲ್ಲ ಅದಕ್ಕೆ ಇತರೆ ಸಾಕ್ಷಿ ವಿಚಾರಣೆಯು ಸಹ ಅಗತ್ಯ ವಿರುತ್ತದೆ. ಆದ್ದರಿಂದ ವಾದಿಯ ವಾದ ಪತ್ರವನ್ನು ಸದರಿ ಅಂಶದ ಆಧಾರದ ಮೇಲೆ ತಿರಸ್ಕರಿಸಲು ಸಾದ್ಯವಿರುವುದಿಲ್ಲ ಎಂದು ಮನಗೊಂಡು **ಅಂಶ-1 ನಕರಾತ್ಮಕ ಎಂದು ಉತ್ತರಿಸಲಾಗಿದೆ.**

15. **ಅಂಶ-2** ಈ ಮೇಲೆ ವಿವರಿಸಿರುವ ಕಾರಣಗಳು ಮತ್ತು ನಾನು ಹೊಂದಿದ ಅಭಿಪ್ರಾಯಗಳಿಗಾಗಿ ಈ ಕೆಳಗಿನಂತೆ ಆದೇಶಿಸುತ್ತಿದ್ದೇನೆ.

**ಆದೇಶ**

**ಪ್ರತಿವಾದಿ ಸಲ್ಲಿಸಿರುವ ಮಧ್ಯಂತರ ಅರ್ಜಿ-2 ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 7 ನಿಯಮ 11(ಎ) ಮತ್ತು (ಡಿ) ಸಹಕಲಂ 151 ನ್ನು ಖರ್ಚು ಸಹಿತ ತಿರಸ್ಕರಿಸಲಾಗಿದೆ.**

(ಆದೇಶವನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ ಅವರು ಗಣಕೀಕೃತಗೊಳಿಸಿದ ತರ್ಜುಮೆಯನ್ನು ತಿದ್ದಿ ಸಹಿ ಮಾಡಿ ದಿನಾಂಕ: 04 ನೇ ಸೆಪ್ಟೆಂಬರ್ , 2021 ರಂದು ತೆರೆದ ನ್ಯಾಯಾಲಯದಲ್ಲಿ ನಾನು ಉದ್ಘೋಷಿಸಿರುತ್ತೇನೆ).

**(ಸಂದೇಶ.ಕೆ)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ,ದೇವನಹಳ್ಳಿ .